5.	ಭವಾನಿ ಖಂಡಸಾರಿ ಬರೂರು, ಬೀದರ್ ತಾಲ್ಲೂಕ್	500 ಟಿಸಿಡಿ	ಶ್ರೀ ಮಾರುತಿ ಕಾಶೀಪುರ
6.	ಮಹಾವೀರಖಂಡಸಾರಿ ಮಗದಲ್ ತಾ: ಬೀದರ್	200 ಟಿಸಿಡಿ	ಮುಖೇಶ್‌ಕುಮಾರ್ ಅಗರ್‌ವಾಲ್
7.	ಮಾರುತಿಖಂಡಸಾರಿ ನಸ್ತಾಪುರ ತಾ: ಬಸವಕಲ್ಯಾಣ, ಬೀದರ್	300	ಶ್ರೀ ಜಿ.ವಿ. ಪಾಟೀಲ್
8.	ನ್ಯೂ ಕರ್ನಾಟಕ ಖಂಡಸಾರಿ ಮೈಲೂರು ತಾ: ಬಸವಕಲ್ಯಾಣ, ಬೀದರ್	200 ಟಿಸಿಡಿ	ಶ್ರೀ ಘನಶ್ಯಾಮ್‌ದಾಸ್ ಮದನ್‌ಮೋಹನ್ ಗೋಯಿಲ್
9.	ಶಿವಶಕ್ತಿ ಶುಗರ್ಸ್ ಮಿಲ್ ಬಂಗೂರು ಬೀದರ್ ಜಿಲ್ಲೆ	300 ಟಿಸಿಡಿ	ಶ್ರೀ ಸುನಿಲ್‌ಕುಮಾರ್ ಅಗರವಾಲ್
10.	ಜೈಹನುಮಾನ್‌ಖಂಡ ಖಂಡಸಾರಿ ಕೇಡಂಬಲ ಹುಮ್ನಾಬಾದ್, ಬೀದರ್ ಜಿಲ್ಲೆ.	500 ಟಿಸಿಡಿ	ಶ್ರೀ ರಾಮಗೋಪಾಲ್ ಮಲು

ಮುಂದುವರೆದ ಖಂಡಸಾರಿ ಘಟಕಗಳು ಸಹ-ವಿದ್ಯುತ್ ಘಟಕವನ್ನಾಗಲೀ, ಡಿಸ್ಟಿಲರಿಯನ್ನಾಗಲೀ ಹೊಂದಲು ಅರ್ಹತೆ ಪಡೆಯಲಾರವು.

ಇ) ಬೀದರ್ ಜಿಲ್ಲೆಯಲ್ಲಿ ಹಾಲಿ ಸುಮಾರು 15 ಲಕ್ಷ ಟನ್ ಕಬ್ಬು ಉತ್ಪಾದನೆಯಿದ್ದು ಹಾಲಿ ಕಾರ್ಯನಿರತ ಸಕ್ಕರೆ ಕಾರ್ಖಾನೆಗಳಿಗೆ ಖಂಡಸಾರಿ ಘಟಕಗಳಿಗೆ ಕಬ್ಬಿನ ಕೊರತೆ ಇರುವುದಿಲ್ಲ. ಪ್ರತಿಯೊಂದು ಸಕ್ಕರೆ ಕಾರ್ಖಾನೆಗಳು ಕಬ್ಬಿನ ಅಭಿವೃದ್ಧಿಪಡಿಸಲು ಹಾಗೂ ಉತ್ತಮ ತಳಿ ಕಬ್ಬನ್ನು ಬೆಳೆಯಲು ಕ್ರಮ ತೆಗೆದುಕೊಳ್ಳುತ್ತಲಿವೆ.

ಕಮಲಪೂರ್ ಕ್ಷೇತ್ರದ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಅಭಿವೃದ್ಧಿ ನಿಗಮದಡಿ ಕೊರೆಯಲಾದ ಕೊಳವೆಬಾವಿ

1148 (1482) ಶ್ರೀ ರೇವುನಾಯಕ್ ಬೆಳಮಗಿ (ಕಮಲಪೂರ್) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆ ಕಮಲಾಪುರ ಮತ ಕ್ಷೇತ್ರದಲ್ಲಿ 2000-01, 2001-02ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಡಿಯಲ್ಲಿ ಮಂಜೂರಾದ ವೈಯಕ್ತಿಕ ಕೊಳವೆಬಾವಿಗಳೆಷ್ಟು ?

ಆ) ಇವುಗಳಲ್ಲಿ ಬಾವಿ ಕೊರೆದಿದ್ದು ಎಷ್ಟು ; ಕೊರೆಯದ ಬಾವಿಗಳು ಎಷ್ಟು ; ಬಾವಿ ಕೊರೆಯದಿರಲು ಕಾರಣವೇನು ?

ಇ) ಬಾಕಿ ಇರುವುದನ್ನು ಪೂರ್ಣಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಕಮಲಾಪುರ ವಿಧಾನ ಸಭಾ ಕ್ಷೇತ್ರಕ್ಕೆ ನಿಗದಿಪಡಿಸಿದ ವರ್ಷವಾರು ಗುರಿ

ವರ್ಷ	ವೈಯಕ್ತಿಕ ಕೊಳವೆಬಾವಿ ಗುರಿ		ಗಂಗಾ ಕಲ್ಯಾಣ ಯೋಜನೆಯ ಗುರಿ	
	ಪ. ಜಾತಿ	ಪ. ವರ್ಗ	ಪರಿಶಿಷ್ಟ ಜಾತಿ	ಪರಿಶಿಷ್ಟ ವರ್ಗ
2000-01	05	02	-	-
2001-02	15	05	02	-
2002-03	04	01	02	-
ಒಟ್ಟು	24	08	04	-

ಆ) ಕಮಲಾಪುರ ವಿಧಾನಸಭಾ ಕ್ಷೇತ್ರದಲ್ಲಿ ಈ ಕೆಳಕಂಡಂತೆ ಪ್ರಗತಿ ಸಾಧಿಸಲಾಗಿದೆ.

ವರ್ಷ	ವೈಯಕ್ತಿಕಕೊಳವೆ ಬಾವಿಗಳ ಸಾಧನೆ		ಕೊರೆಯದ ಬಾವಿಗಳು		ಗಂಗಾಕಲ್ಯಾಣ ಯೋಜನೆಯ ಸಾಧನೆ		ಕೊರೆಯದ ಬಾವಿಗಳು	
	ಪ.ಜಾ	ಪ.ವ	ಪ.ಜಾ	ಪ.ವ	ಪ.ಜಾ	ಪ.ವ	ಪ.ಜಾ	ಪ.ವ
2000-01	11	--	--	02	01	--	--	--
2001-02	01	--	14	05	--	--	02	--
2002-03	--	--	04	01	--	--	02	--
ಒಟ್ಟು	12	--	18	08	01	--	04	--

ಅಂತರ ಜಲ ದೊರಕದೇ ಇರುವ ಹಾಗೂ ಕೊಳವೆಬಾವಿಗಳ ವಿಫಲತೆ ಕಾರಣವಾಗಿ, ಬಿಂದುಗಳನ್ನು ಗುರುತಿಸಲು ಗುತ್ತಿಗೆದಾರರಿಗೆ ಕಷ್ಟಸಾಧ್ಯವಾಗುತ್ತಿದೆ. 2002-03ನೇ ಸಾಲಿನಲ್ಲಿ ಪರ್ಯಾಯವಾಗಿ ಪ್ರಯತ್ನಿಸಲಾಗುತ್ತಿದೆ.

ಇ) ಹೊಸ ಟೆಂಡರ್‌ಗಳನ್ನು ಕರೆದು ಪುನಃ ಪ್ರಯತ್ನಿಸಲಾಗುತ್ತಿದೆ.

ಗುಲ್ಬರ್ಗಾ ಜಿಲ್ಲೆಯಲ್ಲಿರುವ ಸಣ್ಣ ಕೈಗಾರಿಕೆಗಳಿಗೆ ಸಹಾಯಧನ ಬಿಡುಗಡೆ

1149 (1483) ಶ್ರೀ ರೇವು ನಾಯಕ್ ಬೆಳಮಗಿ (ಕಮಲಪುರ್) ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆ ಹಾಗೂ ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯಲ್ಲಿರುವ ಸಣ್ಣ ಕೈಗಾರಿಕೆಗಳು ಎಷ್ಟು ?

ಆ) ಇವುಗಳಿಗೆ ಸಹಾಯಧನ ಬಿಡುಗಡೆ ಮಾಡಲು ಬಾಕಿ ಇರುವುದು ನಿಜವೇ ಎಷ್ಟು ಸಹಾಯಧನ ಬಾಕಿ ಇದೆ ?

ಇ) ಸಹಾಯಧನ ಬಿಡುಗಡೆ ಮಾಡಲು ಕೈಗೊಂಡಿರುವ ಕ್ರಮಗಳೇನು ; ಈವರೆಗೂ ಸಹಾಯಧನ ಬಿಡುಗಡೆ ಮಾಡದೇ ಇರಲು ಕಾರಣಗಳೇನು ?

ಶ್ರೀ ಆರ್. ರೋಷನ್‌ಬೇಗ್ (ಸಣ್ಣ ಪ್ರಮಾಣದ ಕೈಗಾರಿಕೆ ಹಾಗೂ ಹಜ್ ಸಚಿವರು) :

ಅ) ದಿನಾಂಕ: 31.01.2003ರ ಅಂತ್ಯಕ್ಕೆ 10806 ಸಣ್ಣ ಕೈಗಾರಿಕಾ ಘಟಕಗಳು ಗುಲ್ಬರ್ಗಾ ಜಿಲ್ಲೆಯಲ್ಲಿ ನೋಂದಾಯಿಸಲ್ಪಟ್ಟಿವೆ.